**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಡಾ|| ತೇಜಸ್ವಿನಿ ಗೌಡ ರವರು ನಿಯಮ 72ರ ಅಡಿಯಲ್ಲಿ ನೀಡಿರುವ ಗಮನ ಸೆಳೆಯುವ ಸೂಚನೆ ಸಂಖ್ಯೆ: 06ಕ್ಕೆ ಉತ್ತರ.**

ಕರ್ನಾಟಕ ರಾಜ್ಯದಲ್ಲಿ ಪುರಾತತ್ವ ಮಹತ್ವವುಳ್ಳ ಸುಮಾರು 1812 ದೇವಾಲಯಗಳಿದ್ದು 545
ದೇವಸ್ಥಾನಗಳು ಪ್ರಮುಖವಾಗಿವೆ. ಇವುಗಳಿಗೆ ನಾಡನ್ನು ಆಳಿದ ಪ್ರಸಿದ್ಧ ಅರಸರು ಪಾಳೆಯಗಾರರು
ಮತ್ತು ಜನತೆ ದೈವಭಕ್ತಿ ನೀಡಿದ ಸಾಂಸ್ಕೃತಿಕ ಸಂಪತ್ತುಗಳು ಅಪಾರವಾಗಿವೆ. ಮತ, ಜಾತಿ ಭೇದವಿಲ್ಲದೆ
ಸರ್ವರೂ ದೇವರಿಗೆ ದಾನಧರ್ಮ ಆಭರಣ, ಜಮೀನು, ಉಂಬಳಿ ನೀಡಿದ್ದಾರೆ. ಇದರಂತೆ ಕೆಳದಿ ಅರಸ-
ಅರಸಿಯರು ಆನಂದಪುರ ಮತ್ತು ಭುವನಗಿರಿ ದುರ್ಗ (ಕವಲೇದುರ್ಗ) ದಲ್ಲಿ ಮಸೀದಿಗೆ ದಾನ,
ಮಂಗಳೂರಿಲ್ಲಿ ಮಿಲಾಗ್ರೇಯಸ್ ಚರ್ಚ್ ನಿರ್ಮಾಣಕ್ಕೆ ಭೂಮಿದಾನ, ಮೂಡಬಿದಿರೆಯ ಸಾವಿರ ಕಂಬದ
ಬಸದಿಯ ಜೀರ್ಣೋದ್ಧಾರ ಶೃಂಗೇರಿ, ಉಡುಪಿ, ಮುಳಬಾಗಿಲು ಮಠಗಳ ಜೀರ್ಣೋದ್ಧಾರ, ಉಡುಪಿ
ಕೃಷ್ಣದೇವರಿಗೆ ಶಿಲಾಮಯ ದೇವಸ್ಥಾನ ನಿರ್ಮಾಣ, ಕೊಲ್ಲೂರು ಮೂಕಾಂಬಿಕಾ ದೇವಾಲಯ, ಶಂಕರ
ನಾರಾಯಣ, ಕಳಸ, ಸುಬ್ರಹ್ಮಣ್ಯ ದೇವಾಲಯಗಳಿಗೆ ದಾನದತ್ತಿ ನೀಡಿಕೆ ಹಾಗೆಯೇ ರಥಗಳನ್ನು ಮಾಡಿ
ಕೊಡುಗೆ ಇತ್ತಿದ್ದಾರೆ. ಕೆಳದಿ ಚೆನ್ನಮ್ಮಾಜಿ, ಶಿವಾಜಿಪುತ್ರ ರಾಜಾರಾಮರಿಗೆ ಆಶ್ರಯ ನೀಡಿ ಕ್ರೂರಿ
ಮತಾಂತರಿ ಔರಂಗಜೇಬನೊಂದಿಗೆ ಯುದ್ಧ ಮಾಡಿ ಜಯಶಾಲಿಯಾದವರು. ಹಾಗೆಯೇ ಮಸೀದಿ, ಛತ್ರ,
ಅಗ್ರಹಾರ, ಕೆರೆ, ಬಾವಿ, ಧ್ವಜಸ್ತಂಭ, ಕಲ್ಯಾಣಿ, ಮೊದಲಾದವನ್ನು ನಿರ್ಮಿಸಿದ ಉಲ್ಲೇಖವಿದೆ. ಸುಮಾರು
103ಕ್ಕೂ ಹೆಚ್ಚು ವೀರಶೈವ ಮಠಗಳು ನಿರ್ಮಾಣಗೊಂಡಿವೆ. ಹಾಗೆಯೇ ಬಾರಕೂರು, ಆರಗ, ಬಿದನೂರು
ಸಿದ್ದಾಪುರ, ಬೆಣ್ಣೆವಳ್ಳಿ, ಬೋಳೂರು ಕೋಡಿಯಾಲ ಮುಂತಾದೆಡೆ ಮಠಗಳಿದ್ದುದು ತಿಳಿದುಬರುತ್ತದೆ.
ಹೊನ್ನಾಳಿಯ ಕಲ್ಲುಮಠ, ಮೂಡಗೆರೆ ಶಂಕರನಾರಾಯಣ, ಆರಗ, ಕೌಲೇದುರ್ಗ 'ನಗರ' ಮುಂತಾದೆಡೆ
ಬ್ರಾಹ್ಮಣ ಮಠಗಳು ಇನ್ನುಳಿದವು ವೀರಶೈವ ಮಠಗಳಾಗಿವೆ. ಕೆಳದಿ ಅರಸರ ಕಾಲದಲ್ಲಿ 150 ಹೆಚ್ಚಾಗಿ
ದೇವಾಲಯಗಳು ಹಾಗೂ ಮಠಗಳು ನಿರ್ಮಾಣಗೊಂಡಿವೆ. ದೇಶದ ಸುಭಿಕ್ಷ ಮತ್ತು ಕ್ಷೇಮಕ್ಕಾಗಿ ಗುಡಿ-
ಮಠಗಳ ಸುವ್ಯವಸ್ಥೆ ಹಾಗೂ ವಾರ್ಷಿಕ ಪೂಜಾದಿ ವೆಚ್ಚಗಳಿಗಾಗಿ ಅಪಾರ ಭೂಮಿ, ನಗನಾಣ್ಯಗಳೂ
ಕೊಡುಗೈ ದಾನಿಗಳಾಗಿ ನೀಡಿದ್ದರೂ, ಸ್ವತಂತ್ರ ಭಾರತದ ಭೂಸುಧಾರಣೆ ಕಾಯ್ದೆಯಡಿ ಈ ದೇವಾಲಯದ
ಭೂಮಿಗಳನ್ನು ಹಿಂದೆ ಪಡೆದಿರುವುದರಿಂದ ಸೂಕ್ತ ಆರ್ಥಿಕ ಭದ್ರತೆ ಇಲ್ಲದೆ ಈ ಕ್ಷೇತ್ರ ದಯನೀಯ
ಸ್ಥಿತಿಯಲ್ಲಿರುವುದು ವೈಭವದ ನಾಡಿನ ಅಳಿದ ಚೇತನಗಳಿಗೆ ಬಗೆದ ದ್ರೋಹವೇ ಎನ್ನಬಹುದು. ಕೆಳದಿ
ಇಕ್ಕೇರಿ, ಕೊಲ್ಲೂರು, ಶೃಂಗೇರಿ, ಕಮಲಶಿಲೆ, ಶಂಕರನಾರಾಯಣ, ಸಕ್ಕರೆಪಟ್ಟಣ, ಶೃಂಗೇರಿಗೆ ನೀಡಿದ
ಚಿನ್ನದ ಗೋಪಾಲಕೃಷ್ಣ ಮೂರ್ತಿ, ಸ್ಫಟಿಕಲಿಂಗ, ವಜ್ರ ವೈಢೂರ್ಯ ಕೊಲ್ಲೂರು ದೇವಿಯ ಕಂಠಹಾರದ
ಪಚ್ಚೆ, ಇಕ್ಕೇರಿಯ ಅಘೋರೇಶ್ವರ ಮೂರ್ತಿಯ 32 ಕೈಗಳ ಕಂಚಿನ ಮೂರ್ತಿ, ಬಿದನೂರಿನ
ನೀಲಕಂಠೇಶ್ವರ ದೇವಾಲಯದ ಮೇಲ್ಭಾಗದಲ್ಲಿ ಚಿನ್ನದ ಹೊದಿಕೆ, ಶಂಕರನಾರಾಯಣ ದೇವರಿಗೆ ಚಿನ್ನದ
ಮುಖವಾಡ, ಸಕ್ಕರೆಪಟ್ಟಣದ ರಂಗನಾಥನಿಗೆ ಪಚ್ಚೆ, ಗದಗದ ತೋಂಟದಾರ್ಯಮಠಕ್ಕೆ ಚಿನ್ನದ
ಪಾದುಕೆ. ಆದರೆ, ಈ ಮೇಲ್ಕಂಡ ದೇವಾಲಯಗಳಲ್ಲಿ ಹಾಗೂ ಇತರೆ ಸ್ಮಾರಕಗಳಿರುವಲ್ಲಿ ಈ ಅರಸರು
ದಾನಧರ್ಮ ನೀಡಿದ ಬಗ್ಗೆ ಫಲಕಗಳನ್ನು ಹಾಕುವ ಮೂಲಕ ನಾಡಿನ ಇಂದಿನ ಜನಾಂಗಕ್ಕೆ ನಮ್ಮ
ನಾಡಿನ ಹಿರಿಯರು ಆದರ್ಶ ಗುಣಗಳನ್ನು ನೆನಪಿಸಿ ಸ್ಮರಿಸುವಂತೆ ಮಾಡಲು ಕಡ್ಡಾಯವಾಗಿ
ಫಲಕಗಳನ್ನು ಅಳವಡಿಸುವಂತೆ ಸರ್ಕಾರ ಸೂಕ್ತ ಕ್ರಮವಹಿಸಲು ಆಗ್ರಹಿಸುತ್ತಿದ್ದೇನೆ.

*****

ಕೆಳದಿ ಸಾಮ್ರಾಜ್ಯದ ಅರಸ ಮತ್ತು ಅರಸಿಯರು ನಾಡಿನಾದ್ಯಂತ ಇರುವ
ದೇವಾಲಯ/ಸ್ಮಾರಕಗಳಿಗೆ ದಾನವನ್ನು ನೀಡಿರುವವರ ಕುರಿತಾಗಿ ಅಧಿಕೃತ ದಾಖಲೆಗಳನ್ನು ಪರಿಶೀಲಿಸಿ
ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯಡಿ ಬರುವ ರಾಜ್ಯ ಸಂರಕ್ಷಿತ ಸ್ಮಾರಕಗಳಲ್ಲಿ
ಮಾಹಿತಿ ಫಲಕಗಳನ್ನು ಅಳವಡಿಸಲು ಕ್ರಮ ಕೈಗೊಳ್ಳಲಾಗುವುದು.

ಸಂಖ್ಯೆ: ಟಿಓಆರ್ 360 ಟಿಡಿವಿ 2021

(ಆನಂದ್ ಸಿಂಗ್)
ಪ್ರವಾಸೋದ್ಯಮ ಹಾಗೂ
ಪರಿಸರ ಮತ್ತು ಜೀವಿ ಶಾಸ್ತ್ರ, ಸಚಿವರು